ಅಭಿಪ್ರಾಯ ಮೂಲಕವಾದ ಚುನಾವಣೆಯು, ಆ ಕಾಲದಲ್ಲಿ ಮ್ಯುನಿಸಿಪಲ್ ಕವಿ್ಪನಿನ ಪ್ರೆಸಿಡೆಂಟರವರಿಂದ ಗೊತ್ತು ಮಾಡಲ್ಪಡುವಂಥಾ ವಂದು ದಿವಸದಲ್ಲಿ ನಡಿಸಲ್ಪಡತಕ್ಕದ್ದು, ಪರಂತು ಹಾಂಗೆ ಗೊತ್ತುಮಾಡಲ್ಪಡುವ ದಿವಸವು ಸನಾಜ ಕೇರಿದ ತಾರೀಖು ಮೊದಲು ಮೂರು ದಿವಸದ ತರುವಾಯಯಿರತಕ್ಕದ್ದು.

ಹುಕ್ಕುಂ ಬಮೋಜೀಬ್,
ಯಲ್. ಡಬ್ಳಿಯು. ಕಿಂಗ್,
ರೆಸಿಡೆಂಟರ ಅಸಿಸ್ಟೆಂಟ್.

ಫಿನಾರ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಮಿಲ್‌ವೇ ಲೋ್.

ತಾರೀಖು 6ನೇ ಜುಲೈ 1883.

ಲಂಡ್ರನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡ್ರನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡ್ರನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಫ್ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜೂ ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟೂದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಫ್ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.

ಫಾರೆಸ್ಟ್ರಿ ಇಲಾಖಾ.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ತಾರೀಖು 9ನೇ ಆಗಸ್ಟು 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ಕಾಣಿಸಿಯಿರುವ ಡಿಪೋಗಳಿಗೆ ಕಂಟ್ರಾಕ್ಟು ಮೂಲಕ ನಾಟಾ ವಗ್ಯೆರೇ ಸಾಮಾನು ಜಮಾಯಿಸುವದಕ್ಕೆ ಈ ತಾರೀಖು ಲಾಗಾಯತು ಸೆಪ್ಟೆಂಬರ್ ತಾರೀಖು 30ರ ವರಿಗೆ ಟೆಂಡರುಗಳು ಅಂಗೀಕರಿಸಲ್ಪಡುತ್ತದೆ.

1. ಈ ಕಂಟ್ರಾಕ್ಟು ಕಂಟ್ರಾಕ್ಟು ತಾರೀಖು ಲಾಗಾಯತು 1888ನೇ ಇಸವಿ ಮೇ ತಾರೀಖು 31ರ ವರಿಗೆ ಜಾರೀಯಲ್ಲಿ ಯಿರತಕ್ಕದ್ದು.

1.	ಶಿವಮೊಗ್ಗಾ ಡಿಪೊ ..	5.	ಚನ್ನಗಿರೀ ಡಿಪೊ ..
2.	ಆಯನೂರು ..	6.	ಲಕ್ಕವಳ್ಳಿ ..
3.	ಶಿಕಾರಿಪುರ ..	7.	ತೀರ್ಥಕೆರೇ ..
4.	ಕಿರುಳಕೊಪ್ಪ ..	8.	ಕಣಬೂರು ..

2. ಟೆಂಡರುಗಳು ಯಿಂಥಾ "ಡಿಪೋಗಳಿಗೆ ನಾಟಾ ವಗ್ಯೆರೇ ಜಮಾಯಿಸತಕ್ಕ ಬಗ್ಯೆ ಟೆಂಡರ್" ಯಂದು ಲಿಫಾಫೆಗಳ ಮೇಲೆ ಬರೆ ಯಿರತಕ್ಕದ್ದು.

3. ಪ್ರತಿ ವಂದು ಡಿಪೋಕ್ಕೂ ಯಿಷ್ಟು ನಾಟಾ ವಗ್ಯೆರೇ ಜಮಾಯಿಸಬೇಕೆಂಬ ತಪಸೀಲ್, ಮತ್ತು ಯಾವ ಜಂಗ್ಲೀಯಿಂದ ನಾಟಾ ಕತರಾಯಿಸಬೇಕೆಂಬುವದು ಮತ್ತು ಈ ವಿಷಯದಲ್ಲಿ ತಿಳಿಯಬೇಕಾದ ಇತರ ಸಂಗತಿಗಳನ್ನು ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟು ಅಸಿಸ್ಟೆಂಟ್ ಕಂಸರ್‌ವೇಟರ್ ಸಾಹೇಬರವರ ಆಫೀಸಿನಲ್ಲಿ ನೋಟೀಸ್ ತಖ್ತೆಯಮೇಲೆ ನೋಡಿ ತಿಳಿದುಕೊಳ್ಳತಕ್ಕದ್ದು.